**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರ ನ್ಯಾಯಾಲಯ ಹಾಗೂ ಜೆ ಎಂ. ಎಫ್. ಸಿ, ಮುಧೋಳ**

| | |
|---|---|
| ಸಿ.ಸಿ.ನಂ. | 110/2024 |
| ಸಿ.ಡಬ್ಲ್ಯೂ | 4 |
| ಪಿ.ಡಬ್ಲ್ಯೂ | 2 |

| | | |
|---|---|---|
| ಹೆಸರು | :- | ಮಂಜುನಾಥ ಬಸುನಾಯಕ |
| ತಂದೆ/ಗಂಡನ ಹೆಸರು | :- | ಯಲ್ಲಪ್ಪ |
| ವಯಸ್ಸು | :- | 37 ವರ್ಷ |
| ಉದ್ಯೋಗ | :- | ಒಕ್ಕಲುತನ |
| ವಾಸಸ್ಥಳ | :- | ಭಂಟನೂರ |

ಸಾಕ್ಷಿಯನ್ನು ದಿಃ02.08.2025 ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ ರವರಿಂದ**

1. ದಿಃ15.04.2023 ರಂದು ರಾತ್ರಿ 9-30 ಗಂಟೆಗೆ ನಾನು ಹೊಲಕ್ಕೆ ನೀರು ಹಾಯಿಸಲು ಆರೋಪಿತನನ್ನು ಕರೆದೆನು. ಆಗ ಆರೋಪಿತ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ನಂತರ ಆರೋಪಿತ ನನ್ನ ನಡುವೆ ಜಗಳ ಆಗಿದ್ದು ಆರೋಪಿತ ಕಬ್ಬು ಕಡಿಯುವ ಕುಡಗೋಲಿನಿಂದ ನನ್ನ ಬಲ ಕಪಾಳಿಗೆ ಹೊಡೆದ. ಅದರಿಂದ ರಕ್ತಸ್ರಾವ ಆಗಿರುತ್ತದೆ. ಚಾಸಾ-6 ಮತ್ತು ಚಾಸಾ-7 ರವರು ಜಗಳ ಬಿಡಿಸಿದರು. ನನ್ನನ್ನು ಖಾಸಗಿ ವಾಹನದಲ್ಲಿ ಬಾಗಲಕೋಟೆ ಜಿಲ್ಲಾಸ್ಪತ್ರೆಗೆ ಕರೆದುಕೊಂಡು ಹೋದರು. ಆಸ್ಪತ್ರೆಗೆ ಲೋಕಾಪೂರ ಪೊಲೀಸ ಠಾಣೆಯ ಸಿಬ್ಬಂದಿ ಬಂದು ನನ್ನನ್ನು ವಿಚಾರಣೆ ಮಾಡಿರುತ್ತಾರೆ. ನ್ಯಾಯಾಲಯದ ಮುಂದಿರುವ ಆರೋಪಿತನನ್ನು ಸಾಕ್ಷಿ ಗುರುತಿಸುತ್ತಾರೆ. ಸಾಕ್ಷಿಗೆ ಈಗ ಮುಮಾ-1 ನ್ನು ತೋರಿಸುತ್ತಿದ್ದು ಅದನ್ನು ಅವರು ಗುರುತಿಸುತ್ತಾರೆ. ಮುಮಾ-1 ರಿಂದಲೇ ಆರೋಪಿತ ನನಗೆ ಹೊಡೆದಿರುತ್ತೇನೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ನಾನು ಪೊಲೀಸರ ಸಮಕ್ಷಮ ಹೇಳಿಕೆ ನೀಡಿರುತ್ತೇನೆ.

**ಪಾಟೀ ಸವಾಲು : ಶ್ರೀ.ಎಸ್.ಎಫ್.ಬಿ ವಕೀಲರಿಂದ ಆರೋಪಿ ಪರವಾಗಿ**

1. ನೀವು ಹೊಲ ಲಾವಣಿ ಮಾಡಿಕೊಡಿಂದ್ದೀರಿ ಎಂದರೆ ನನ್ನ ಸ್ವಂತ ವ್ಯವಸಾಯದ ಜಮೀನು ಎಂದು ಹೇಳುತ್ತಾರೆ. ಆರೋಪಿ ನಿಮ್ಮ ಬಳಿ ಎಷ್ಟು ವರ್ಷದಿಂದ ಕೆಲಸ ಮಾಡುತ್ತಿದ್ದ ಎಂದರೆ 1 ತಿಂಗಳಿಂದ ಎಂದು ಹೇಳುತ್ತಾರೆ. ಆರೋಪಿತನಿಗೆ ದಿನಕ್ಕೆ 300 ರೂಪಾಯಿ ಸಂಬಳ ನೀಡುತ್ತಿದ್ದೆನು. ಆರೋಪಿತ ನಿಮ್ಮ ವ್ಯವಸಾಯದ ಜಮೀನಿನಲ್ಲಿ ಹಿಂದೆಯು ಕೆಲಸ ಮಾಡಿದ್ದು, ಆತನಿಗೆ ನೀವು ಸಂಬಳ ನೀಡಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತನನ್ನು ಕರೆಯಲು ಹೋದಾಗ ಆತ ಸಂಬಳ ನೀಡದ ಕಾರಣ ಬರುವುದಿಲ್ಲ ಎಂದು ಹೇಳಿದಾಗ ನೀವೇ

ಆರೋಪಿತನನ್ನು ಅವಾಚ್ಯ ಶಬ್ದಗಳಿಂದ ಬೈದಿರಿ ಎಂದರೆ ಸರಿಯಲ್ಲ. ನಿಮ್ಮ ಪ್ರಕಾರ ಮುಮಾ-1 ರಿಂದ ಹೊಡೆದಿದ್ದರ ಪರಿಣಾಮವಾಗಿ ನಿಮ್ಮ ಬಟ್ಟೆಗೆ ರಕ್ತದ ಕಲೆ ಆಗಿತ್ತಾ ಎಂದರೆ ಆಗಿತ್ತು ಎಂದು ಹೇಳುತ್ತಾರೆ. ಪಂಚನಾಮೆ ಸಮಯದಲ್ಲಿ ಸದರಿ ರಕ್ತದ ಕಲೆ ತಗುಲಿದ ಶರ್ಟನ್ನು ಪೊಲೀಸರಿಗೆ ನೀಡಿದ್ದೀರಾ ಎಂದರೆ ಇಲ್ಲ ಎಂದು ಸಾಕ್ಷಿ ಹೇಳುತ್ತಾರೆ. ಆಗ ಆಸ್ಪತ್ರೆಯಲ್ಲಿ ಇದ್ದೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಆದ ಘಟನೆ ಮನೆಯ ಮುಂದೆ ಆಗಿಲ್ಲ ಎಂದರೆ ಆತನ ಮನೆಯ ಪಕ್ಕದಲ್ಲಿ ಇದ್ದ ದುರ್ಗಾದೇವಿ ದೇವಸ್ಥಾನದ ಮುಂದೆ ಆಗಿದೆ ಎಂದು ಹೇಳುತ್ತಾರೆ. ನಿಮ್ಮ ಪ್ರಕಾರ ಆದ ಘಟನೆಯ ಸಮಯದಲ್ಲಿ ಚಾಸಾ-5 ಮತ್ತು ಚಾಸಾ-6 ರವರು ಇರಲಿಲ್ಲ ಎಂದರೆ ಗದ್ದಲ ಕೇಳಿ ಬಂದಿದ್ದಾರೆ ಎಂದು ಹೇಳುತ್ತಾರೆ. ನಿಮ್ಮನ್ನು ಪೊಲೀಸರು ವಿಚಾರಣೆ ಮಾಡುವ ಸಮಯದಲ್ಲಿ ನೀವು ಹೇಳಿಕೆ ನೀಡಿಲ್ಲ ಎಂದರೆ ನನಗೆ ಗೊತ್ತಿಲ್ಲ. ವಿಚಾರಣೆ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನೀವು ಸರಕಾರಿ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿಲ್ಲ, ಪೊಲೀಸ ಠಾಣೆಯಲ್ಲಿ ಹೇಳಿಕೆ ನೀಡಿದ್ದೀರಿ ಎಂದರೆ ಸರಕಾರಿ ಆಸ್ಪತ್ರೆಯಲ್ಲಿ ಹೇಳಿಕೆ ನೀಡಿದ್ದೇನೆ ಎಂದು ಹೇಳುತ್ತಾರೆ. ಘಟನೆಯ ಬಗ್ಗೆ ನಿಮ್ಮ ಹೆಂಡತಿ ಚಾಸಾ-1 ರವರೇ ಬರೆಸಿದ್ದು ನಿಮಗೆ ಅದರ ಬಗ್ಗೆ ಮಾಹಿತಿ ಇಲ್ಲ ಎಂದರೆ ನಾನು ಘಟನೆಯ ಬಗ್ಗೆ ಹೇಳಿದ್ದರ ಆಧಾರದ ಮೇಲೆ ಅವರು ದೂರು ನೀಡಿದ್ದಾರೆ ಎಂದು ಹೇಳುತ್ತಾರೆ. ಆ ರೀತಿ ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದು, ಆರೋಪಿತ ಕೆಲಸಕ್ಕೆ ಬರುತ್ತಿಲ್ಲ ಎಂದು ಸುಳ್ಳು ದೂರನ್ನು ನಿಮ್ಮ ಹೆಂಡತಿ ನೀಡಿದ್ದಾರೆ ಎಂದರೆ ಸರಿಯಲ್ಲ. ಚಾಸಾ-6 ಮತ್ತು 7 ರವರು ಜಗಳ ಬಿಡಿಸಿದರು ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಘಟನಾ ಸ್ಥಳಕ್ಕೆ ಚಾಸಾ-1 ಮತ್ತು ಚಾಸಾ-7 ರವರು ನಿಮಗೆ ಬಂದು ಉಪಚಾರ ಮಾಡಿದರು ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಮುಮಾ-1 ಎಲ್ಲಾ ರೈತಾಪಿ ಕುಟುಂಬದಲ್ಲಿ ದೊರಕುತ್ತದೆ ಎಂದರೆ ಸರಿ. ಮುಮಾ-1 ಕ್ಕೂ ಮತ್ತು ಆರೋಪಿತನಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಯಾವುದೇ ಘಟನೆ ಆಗದೇ ಇದ್ದರೂ ಸಹ ನೀವು ಮತ್ತು ಚಾಸಾ-1 ರವರು ಸೇರಿ ಆರೋಪಿತನಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿ, ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

**ಮರು ವಿಚಾರಣೆ : ಇಲ್ಲಾ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು. )

ಓ ಹೇ ಕೇ ಸರಿ ಇದೆ.

ಸಹಿ/-

ಸಾಕ್ಷಿಯ ಸಹಿ

ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ಮುಧೋಳ